ಕರ್ನಾಟಕ ಸರ್ಕಾರ

ಆಯುಕ್ತರ ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ ಬೆಂಗಳೂರು-01

ಸಿ4(3)ಹೆಲ್ತ್ ಕ್ಲಬ್-01/2011-12 ದಿನಾಂಕ: 04.08.2011

**ಸುತ್ತೋಲೆ**

ವಿಷಯ:-ಪ್ರೌಢಶಾಲಾ ಗುಣಮಟ್ಟ ಸಾಧಿಸಲು ಕ್ರಮ ಕೈಗೊಳ್ಳುವ ಕುರಿತು

--000--

ಪ್ರೌಢಶಾಲೆ ಶಿಕ್ಷಣವನ್ನು ಸಾರ್ವತ್ರೀಕರಿಸಲಾಗುತ್ತಿದೆ. ಸಾರ್ವತ್ರೀಕರಣದ ಆಯಾಮದಲ್ಲಿ ಗುಣಮಟ್ಟ ಅಭಿವೃದ್ಧಿ ಪ್ರಮುಖವಾದ ಸ್ತರ, ಗುಣಮಟ್ಟವನ್ನು ವಿದ್ಯಾರ್ಥಿಯ ಕಲಿಕೆಯ ಸಾಧನೆಗೆ ಸಂವಾಧಿಯಾಗಿ ಗ್ರಹಿಸಲ್ಪಡುತ್ತಿದೆ. ವಿದ್ಯಾರ್ಥಿಯ ಕಲಿಕೆ ಮಟ್ಟ ನಿಸ್ಸಂದೇಹವಾಗಿಯೂ ಶಿಕ್ಷಣದ ಗುಣಮಟ್ಟವನ್ನು ಪ್ರತಿನಿಧಿಸುತ್ತಿದೆಯಾದರೂ ಕೇವಲ ಅದು ಮಾತ್ರವೇ ಗುಣಮಟ್ಟವಲ್ಲ. ಗುಣಮಟ್ಟವನ್ನು ಶಾಲಾ ಪರಿಸರದಲ್ಲಿ ನಡೆಯುವ ಸಮಸ್ತ ಚಟುವಟಿಕೆಗಳ (ಪಠ್ಯಕ್ರಮ) ಉತ್ತಮಿಕೆ ಆಯಾ ಶಿಕ್ಷಣದ ಗುಣಮಟ್ಟವನ್ನಾಗಿ ಪರಿಗ್ರಹಿಸುವುದು ಹೆಚ್ಚು ಸಮಗ್ರವಾಗುತ್ತದೆ, ಇಂತಹ ಸಮಷ್ಟಿ ನಿಲುವನ್ನು ಇಲಾಖೆಯ ವಿವಿಧ ಹಂತದ ಭಾಗಿದಾರರು ಹೊಂದಿರಬೇಕಾದುದು ಅಗತ್ಯ. ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ಕಲಿಕೆಯ ಗುಣಮಟ್ಟವನ್ನು ವಿಸ್ತರಿಸಲು ಮುಂದಿನ ಸೂಚನೆಗಳನ್ನು ನೀಡಿದೆ. ವಿದ್ಯಾರ್ಥಿಗಳ ಕಲಿಕೆಯ ಉತ್ತಮಿಕೆಗೆ ಪೂರಕ ಕಾರ್ಯಕ್ರಮಗಳು (Enabling conditions) ಮತ್ತು ನೇರ ಕಾರ್ಯಕ್ರಮಗಳು ಕಾರಣವಾಗುತ್ತವೆ. 2011-12 ರಲ್ಲಿ ಗುಣಮಟ್ಟ ಉತ್ತಮಿಕೆಗೆ ಕೈಗೊಳ್ಳಲಿರುವ ಚಟುವಟಿಕೆಗಳು ಮುಂದಿನಂತೆ ಇವೆ.

| **ಪೂರಕ ಕಾರ್ಯಕ್ರಮಗಳು** | **ನೇರ ಕಾರ್ಯಕ್ರಮಗಳು** |
|---|---|
| ✓ ವಿವಿಧ ಕ್ಲಬ್ ಚಟುವಟಿಕೆಗಳು | ವಿಜ್ಞಾನ ಪ್ರಯೋಗ ಚಟುವಟಿಕೆ |
| ✓ ಶಿಕ್ಷಕರ ತರಭೇತಿಗಳು (R.M.S.A) | Spoken English ಚಟುವಟಿಕೆ |
| ✓ ಎಸ್.ಎಸ್.ಎಲ್.ಸಿ ಫಲಿತಾಂಶ ವೃದ್ಧಿ ಕಾರ್ಯಕ್ರಮ (ಪ್ರತ್ಯೇಕ ಸುತ್ತೋಲೆ ನೀಡಿದೆ) | ಆಯ್ದ ಮಕ್ಕಳಿಗೆ ಮೂಲಾಂಶ ತರಬೇತಿ (R.M.S.A) |

ಆಯುಕ್ತರ ಕಛೇರಿಯಿಂದ ವಿವಿಧ ಕೂಟ ಚಟುವಟಿಕೆ ಸಂಬಂಧ ಹೆಲ್ತ್ ಕ್ಲಬ್ ಸೇರಿದಂತೆ ಮಾಹಿತಿಯನ್ನು ನೀಡಿರುತ್ತದೆ. ಇಲ್ಲಿ ಸೂಚಿಸಿರುವ ನಮೂನೆಯಂತೆ ಮಾಹಿತಿಯನ್ನು ಪ್ರತಿ ತಿಂಗಳು ಶ್ರೀ ಬಿ.ಹೆಚ್ ಬಸವರಾಜು, ಉಪನಿರ್ದೇಶಕರು (ಪ್ರೌಢಶಿಕ್ಷಣ) ಆಯುಕ್ತರ ಕಛೇರಿ ಬೆಂಗಳೂರು ಇವರಿಗೆ ಕಳುಹಿಸುವುದು

ಶಿಕ್ಷಕರ ತರಬೇತಿ ಆಯ್ದ ಮಕ್ಕಳಿಗೆ ಮೂಲಾಂಶ ತರಬೇತಿಯನ್ನು R.M.S.A ಆಯೋಜಿಸುತ್ತಿದ್ದು ಅಲ್ಲಿ ನೀಡುವ ಸೂಚನೆಗಳಂತೆ ಕ್ರಮ ತೆಗೆದುಕೊಳ್ಳಲು ಸೂಚಿಸಿದೆ.

ಪ್ರಸ್ತುತ ಸುತ್ತೋಲೆಯನ್ನು ವಿಜ್ಞಾನ ಪ್ರಯೋಗ ಚಟುವಟಿಕೆ, Spoken English ಚಟುವಟಿಕೆ ಕುರಿತು ಸೂಚನೆಗಳನ್ನು ನೀಡಿದೆ, ಇಲ್ಲಿನ ಸೂಚನೆಗಳ ಜೊತೆಗೆ ನಿಮ್ಮ ವಿವೇಚನೆಗೆ ಒಳಪಟ್ಟ ಅಂಶಗಳನ್ನು ಅಳವಡಿಸುವ ಕಾರ್ಯಕ್ರಮವನ್ನು ಯಶಸ್ವಿಯಾಗಿಸಲು ತಿಳಿಸಿದೆ.

**(ಅ)ವಿಜ್ಞಾನ ಪ್ರಯೋಗ ಚಟುವಟಿಕೆ:-**

ಈ ಹರವಿನಲ್ಲಿ ಮುಖ್ಯವಾಗಿ ಎರಡು ಬಗೆಯ ಚಟುವಟಿಕೆಗಳನ್ನು ಮಾಡುವುದು

- ✓ ವಿಜ್ಞಾನಕ್ಕೆ ಸಂಬಂದಿಸಿದ ಸಹಪಠ್ಯ ಚಟುವಟಿಕೆಗಳು
- ✓ ವಿಜ್ಞಾನ ಪ್ರಯೋಗಗಳನ್ನು ತರಗತಿಯಲ್ಲಿ ಮತ್ತು ಪ್ರತ್ಯೇಕವಾಗಿ ಮಾಡಿಸುವುದು
- ✓ ವಿಜ್ಞಾನಕ್ಕೆ ಸಂಬಂಧಿಸಿದ ಚಟುವಟಿಕೆಗಳನ್ನು ಸಹಪಠ್ಯ ಚಟುವಟಿಕೆಗಳ ಮೂಲಕ ವಿಜ್ಞಾನ ಸಂಘ, ಇಕೋಕ್ಲಬ್, ಮತ್ತು ಹೆಲ್ತ್ ಕ್ಲಬ್ ಮೂಲಕ ನಡೆಸುವುದು. ವಿಜ್ಞಾನ ಸಂಘ, ಹೆಲ್ತ್ ಕ್ಲಬ್ ಕುರಿತು ಪ್ರೌಢಶಾಲೆ ಮಾರ್ಗದರ್ಶಿ ಮತ್ತು ಸುತ್ತೋಲೆ ಮೂಲಕ ಈಗಾಗಲೇ ತಿಳಿಸಿರುತ್ತಾರೆ. ಇಕೋಕ್ಲಬ್ ಗೆ ಸಂಬಂಧಿಸಿದಂತೆ ಡಿ.ಎಸ್.ಇ.ಆರ್.ಟಿ ನಿರ್ವಹಿಸುತ್ತಿದೆ. ಇಲ್ಲಿ ಸೂಚಿಸಿರುವಂತೆ ಎಲ್ಲಾ ಶಾಲೆಗಳು ಕ್ರಮವಹಿಸುವುದನ್ನು ಖಾತ್ರಿ ಪಡಿಸಿಕೊಳ್ಳುವುದು.
- ✓ ವಿಜ್ಞಾನ ಪ್ರಯೋಗಗಳನ್ನು ನಡೆಸುವ ಕುರಿತು

  ಸಿ.ಟಿ.ಇ ಸಂಸ್ಥೆಗಳ ತಮ್ಮ ವ್ಯಾಪ್ತಿಯ DIET ಗಳೊಂದಿಗೆ ಕೂಡಲೇ ಸಮಾಲೋಚಿಸಿ ಪ್ರೌಢಶಾಲಾ ಹಂತದಲ್ಲಿ ಯಾವ ಪ್ರಯೋಗಗಳನ್ನು/ ಯಾವ ಸಮೀಕ್ಷೆಗಳನ್ನು ,ಯಾವ ಯೋಜನಾ ಕಾರ್ಯವನ್ನು ನಿರ್ವಹಿಸಬಹುದು ಎಂಬ ಕುರಿತು ಒಂದು ಪರಿಕಲ್ಪನೆ ಲೇಖನವನ್ನು ತಯಾರಿಸುವುದು.

  DIET ಸಂಸ್ಥೆಯೊಂದಿಗೆ ಈ ಮಾಹಿತಿಯನ್ನು ವಿನಿಮಯ ಮಾಡಿಕೊಳ್ಳುವುದು. DIET ಸಂಸ್ಥೆಗಳು ಬ್ಲಾಕ್ ವಾರು ಅಥವಾ ಕೆಲವು ಬ್ಲಾಕ್ ಗಳನ್ನು ಸೇರಿಸಿ ವಿಜ್ಞಾನದ ಅಧ್ಯಾಪಕರಿಗೆ ಒಂದು ದಿನದ ಅಭಿಶಿಕ್ಷಣವನ್ನು ಆಗಸ್ಟ್ ತಿಂಗಳಿನೊಳಗೆ ನೀಡುವುದು.
- ✓ ಶಾಲಾ ಹಂತದಲ್ಲಿ ತಮ್ಮ ಪ್ರಯೋಗಾಲಯಗಳನ್ನು ಉಪಯೋಗಕ್ಕೆ ಬರುವಂತೆ ಅಣಿಗೊಳಿಸುವುದು. ಅಧ್ಯಾಪಕರು ತಮ್ಮ ತರಗತಿಯಲ್ಲಿ ನಿರ್ವಹಿಸಬೇಕಾದ ಪ್ರಯೋಗಗಳನ್ನು ಪ್ರತ್ಯಕ್ಷಿತೆ ಮೂಲಕ ಮಾಡುತ್ತಿರುವುದನ್ನು ಖಾತ್ರಿ ಪಡಿಸಿಕೊಳ್ಳಲು ಮುಖ್ಯೋಪಾಧ್ಯಾಯರು ಒಂದು ಶೆಡ್ಯೋಲ್ ರಚಿಸಿಕೊಂಡು ಹಿಂಬಾಲಿಕೆ ಕೆಲಸವನ್ನು ಮಾಡುವುದು.
- ✓ ಶಾಲಾ ಹಂತದಲ್ಲಿ ವಿದ್ಯಾರ್ಥಿಗಳು ಸ್ವತ: ಪ್ರಯೋಗ ಮಾಡಲು ವ್ಯವಸ್ಥೆಗೊಳಿಸುವುದು. ಇದಕ್ಕಾಗಿ ವರ್ಷದ ಬೇರೆ ಬೇರೆ ಅವಧಿಯಲ್ಲಿ ಒಂದು ದಿನದ ಕಾರ್ಯಕ್ರಮವನ್ನು ಶಾಲಾ ಹಂತದಲ್ಲಿ ರೂಪಿಸುವುದು
- ✓ ಶಾಲಾ ಹಂತದಲ್ಲಿ ಸಮೀಕ್ಷೆ ಮತ್ತು ಯೋಜನಾ ಕಾರ್ಯವನ್ನು ನಿರ್ವಹಿಸಲು ಅನುಕೂಲವಾಗುವಂತೆ ಒಂದು ಕ್ರಿಯಾ ಯೋಜನೆಯನ್ನು ತಯಾರಿಸುವುದು ಹಾಗೂ ಅನುಷ್ಟಾನಗೊಳಿಸುವುದು.
- ✓ ಈ ರೀತಿ ಶಾಲಾ ಹಂತದಲ್ಲಿ (ಬೆಂಗಳೂರು ಮತ್ತು ಮೈಸೂರು ವಿಭಾಗ) ನೀಡಿರುವ ಅನುಬಂದ ನಮೂನೆಯಂತೆ ಕ್ರೋಡೀಕರಿಸಿ ದಿನಾಂಕ:-15-09-2011 ರೊಳಗೆ ಶ್ರೀ ಬಿ.ಹೆಚ್ ಬಸವರಾಜು, ಉಪನಿರ್ದೇಶಕರು (ಪ್ರೌಢಶಿಕ್ಷಣ) ಆಯುಕ್ತರ ಕಛೇರಿ ಬೆಂಗಳೂರು ಇವರಿಗೆ ಕಳುಹಿಸುವುದು. ಹಾಗೂ ಪ್ರತಿ ತಿಂಗಳು ವರದಿಯನ್ನು ಸಲ್ಲಿಸುವುದು.

## Spoken English ಚಟುವಟಿಕೆ:-

ವಿದ್ಯಾರ್ಥಿಗಳ ಆಂಗ್ಲ ಮೌಖಿಕ ಸಂವಹನ ಸಾಮರ್ಥ್ಯ ವೃದ್ಧಿಸುವ ಸಲುವಾಗಿ ಈ ಚಟುವಟಿಕೆಯನ್ನು ಹಮ್ಮಿಕೊಂಡಿದೆ. ಅನುಷ್ಠಾನ ಕುರಿತು ಕೈಗೊಳ್ಳಬೇಕಾದ ಹಂತಗಳು

- ✓ ಈ ಕುರಿತ ಸಾಹಿತ್ಯ ಅಥವ ಬೆಂಬಲವನ್ನು ಕೋರುವ DIET ಗಳ ಉಪನ್ಯಾಸಕರಿಗೆ ಒಂದು ದಿನದ ಅಭಿಶಿಕ್ಷಣವನ್ನು ನೀಡುವುದು. DIET ಗಳು ಬಯಸುವುದಾದಲ್ಲಿ ತಾನೇ ಸಾಹಿತ್ಯವನ್ನು ರಚಿಸುವುದು
- ✓ Spoken English ಕಾರ್ಯಕ್ರಮವನ್ನು ಶಾಲೆಗಳಲ್ಲಿ ವಾರದಲ್ಲಿ 2 ದಿನ ಶಾಲೇತರ ಅವಧಿಯಲ್ಲಿ ಒಂದೊಂದು ಗಂಟೆಗೆ (01+01) ಇದೇ ವರ್ಷ ಯೋಜಿಸುವುದು
- ✓ ವಿದ್ಯಾರ್ಥಿಗಳು ಸರಳವಾಗಿ ಆಂಗ್ಲಭಾಷೆಯಲ್ಲಿ ಸಂಭಾಷಿಸಲು ಮೊದಲು ಪ್ರಾತ್ಯಕ್ಷಿತೆ ನಂತರ ಅಭ್ಯಾಸ ವಿಧಾನಗಳನ್ನು ಅನುಸರಿಸುವುದು. ಇದಕ್ಕಾಗಿ ಸಾಹಿತ್ಯದ ಕೆಲವು ಹಸ್ತ ಪ್ರತಿಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಶಾಲಾ ಅನುದಾನವನ್ನು ಬಹುಪ್ರತಿ ಮಾಡಿಕೊಳ್ಳಲು ಬಳಸಬಹುದು.
- ✓ ಈ ಸಂಬಂಧ ಒಂದು ಕ್ರಿಯಾ ಯೋಜನೆಯನ್ನು ಪ್ರತಿ ಶಾಲೆ ತಯಾರಿಸಬೇಕು ಇವುಗಳನ್ನು ಬೆಂಗಳೂರು ಮತ್ತು ಮೈಸೂರು ವಿಭಾಗದ ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರುಗಳು ಸೆಪ್ಟೆಂಬರ್ 2ನೇ ವಾರದಲ್ಲಿ ಶ್ರೀ ಬಿ.ಹೆಚ್ ಬಸವರಾಜು, ಉಪನಿರ್ದೇಶಕರು (ಪ್ರೌಢಶಿಕ್ಷಣ) ಆಯುಕ್ತರ ಕಛೇರಿ ಬೆಂಗಳೂರು ಇವರಿಗೆ ಕಳುಹಿಸುವುದು.
- ✓ ಈ ಹಿನ್ನೆಲೆಯಲ್ಲಿ ಆಂಗ್ಲ ಬೋಧಿಸುವ ಶಿಕ್ಷಕರನ್ನು ಒಂದೆಡೆ ಸೇರಿಸಿ ಒಂದು ದಿನದ ಅಭಿಶಿಕ್ಷಣವನ್ನು DIET ಕೊಡುವುದು. ಈ ಕಾರ್ಯವು ಆಗಸ್ಟ್ ತಿಂಗಳೊಳಗೆ ನೀಡುವುದು
- ✓ ಪ್ರತಿ ತಿಂಗಳು ತಪ್ಪದೇ ಈ ಪತ್ರದ ಅನುಬಂಧದಂತೆ ಮಾಹಿತಿಯನ್ನು ಕಳುಹಿಸುವುದು ಗುಲ್ಬರ್ಗಾ ಮತ್ತು ಧಾರವಾಡ ಆಯುಕ್ತಾಲಯಗಳು ತಮ್ಮ ವ್ಯಾಪ್ತಿಯ ಮಾಹಿತಿಯನ್ನು ಸಂಚಯಿಸಿ ಅವರ ಹಂತದಲ್ಲಿ ಹಿಮ್ಮಾಹಿತಿ ನೀಡುವುದು.

(ತುಷಾರ್ ಗಿರಿ ನಾಥ್)
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ
04.08.11

ಇವರಿಗೆ:-

1. ಪ್ರಾಂಶುಪಾಲರು, ಶಿಕ್ಷಕರ ಶಿಕ್ಷಣ ಮಹಾ ವಿದ್ಯಾಲಯ, ( C.T.E)
2. ಬೆಂಗಳೂರು ಮತ್ತು ಮೈಸೂರು ವಿಭಾಗದ ಜಿಲ್ಲಾ ಉಪನಿರ್ದೇಶಕರು (ಆಡಳಿತ)
3. ಬೆಂಗಳೂರು ಮತ್ತು ಮೈಸೂರು ವಿಭಾಗದ ಜಿಲ್ಲಾ DIET ಪ್ರಾಂಶುಪಾಲರು (ಅಭಿವೃದ್ಧಿ)

ಪ್ರತಿಯನ್ನು

4. ರಾಜ್ಯ ಯೋಜನಾ ನಿರ್ದೇಶಕರು, ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ, ಆಯುಕ್ತರ ಕಛೇರಿಯ ಪೂರಕ ಕಟ್ಟಡ ಬೆಂಗಳೂರು
5. ಅಪರ ಆಯುಕ್ತರು ಧಾರವಾಡ ಮತ್ತು ಗುಲ್ಬರ್ಗಾ

## ಅನುಬಂಧ–1 ವಿಜ್ಞಾನ ಪ್ರಯೋಗ ಕೈಗೊಳ್ಳುವ ಕುರಿತು

| 1. ಜಿಲ್ಲೆ | 2. ಅಧ್ಯಾಪಕರಾಗಿ ಅಭಿಶಿಕ್ಷಣ ನೀಡಿದ ದಿನಾಂಕ ಮತ್ತು ನೀಡಿದವರು ಯಾರು | 3. ಪ್ರೌಢಶಾಲೆಗಳು ಶಾಲೆಗಳ ಸಂಖ್ಯೆ | | | | 4. ಪ್ರಯೋಗ ಮಾಡಲು ಅಣಿಗೊಳಿಸಿದ ಶಾಲೆಗಳ ಸಂಖ್ಯೆ | | | |
|---|---|---|---|---|---|---|---|---|---|
| | | ಸರ್ಕಾರಿ | ಅನುದಾನಿತ | ಅನುದಾನ ರಹಿತ | ಒಟ್ಟು | ಸರ್ಕಾರಿ | ಅನುದಾನಿತ | ಅನುದಾನ ರಹಿತ | ಒಟ್ಟು |
| | | | | | | | | | |

| 5. ತರಗತಿಯಲ್ಲಿ ಪ್ರಯೋಗ ಪ್ರಾತ್ಯಕ್ಷಿತೆ ನೀಡುತ್ತಿರುವ ಶಾಲೆಗಳ ಸಂಖ್ಯೆ | | | | 6. ಸಮೀಕ್ಷೆ/ಯೋಜನೆ ಕಾರ್ಯ ಮಾಡುತ್ತಿರುವ ಶಾಲೆಗಳು | | | | 7. ಶೂನ್ಯ ಪ್ರಗತಿ ಇರುವ ಶಾಲೆಗಳ ಕುರಿತು ಕೈಗೊಂಡ ಕ್ರಮಗಳು | | | |
|---|---|---|---|---|---|---|---|---|---|---|---|
| ಸರ್ಕಾರಿ | ಅನುದಾನಿತ | ಅನುದಾನ ರಹಿತ | ಒಟ್ಟು | ಸರ್ಕಾರಿ | ಅನುದಾನಿತ | ಅನುದಾನ ರಹಿತ | ಒಟ್ಟು | ಸರ್ಕಾರಿ | ಅನುದಾನಿತ | ಅನುದಾನ ರಹಿತ | ಒಟ್ಟು |
| | | | | | | | | | | | |

## ಅನುಬಂಧ–2 SPOKEN ENGLISH

| 1. ಜಿಲ್ಲೆ | 2. ಅಧ್ಯಾಪಕರಾಗಿ ಅಭಿಶಿಕ್ಷಣ ನೀಡಿದ ದಿನಾಂಕ ಮತ್ತು ನೀಡಿದವರು ಯಾರು | 3. ಪ್ರೌಢಶಾಲೆಗಳು ಶಾಲೆಗಳ ಸಂಖ್ಯೆ | | | | 4. SPOKEN ENGLISH ಚಟುವಟಿಕೆ ಹಮ್ಮಿಕೊಂಡಿರುವ ಶಾಲೆಗಳು | | | | 5. ವಿದ್ಯಾರ್ಥಿ ಅಧ್ಯಾಪಕರಲ್ಲಿ ಕಂಡುಬಂದ ಸಾಮಾನ್ಯ ಅಭಿಪ್ರಾಯ |
|---|---|---|---|---|---|---|---|---|---|---|
| | | ಸರ್ಕಾರಿ | ಅನುದಾನಿತ | ಅನುದಾನ ರಹಿತ | ಒಟ್ಟು | ಸರ್ಕಾರಿ | ಅನುದಾನಿತ | ಅನುದಾನ ರಹಿತ | ಒಟ್ಟು | |
| | | | | | | | | | | |